"ಮಧುರ ಮಕ್ಕಳೇ: ನೀಮ್ಮೆಲ್ಲರನ್ನು ಹಿಂತಿರುಗಿ ಕರೆದುಕೊಂಡುಹೋಗಲು ಕಾಲರಕಾಲ ತಂದೆಯು ಬಂದಿದ್ದಾರೆ ಆದ್ದರಿಂದ ನೆನಪಿನಿಂದ ವಿಕರ್ಮಗಳ ಹೊರೆಯನ್ನು ಸಮಾಪ್ತಿ ಮಾಡಿ, ತಮ್ಮ ದೇಹದಲ್ಲಿನ ಮೋಹವನ್ನು ತೆಗೆದುಹಾಕಿ"

ಪ್ರಶ್ನೆ: ಪ್ರಶ್ನೇ: ಭಕ್ತರ ಯಾವ ಕೂಗನ್ನು ತಂದೆಯು ಕೇಳಿದಾಗ ಭಕ್ತರು ಖುಷಿಯಾಗುವ ಬದಲು ದುಃಖಿಯಾಗುತ್ತಾರೆ?

ಉತ್ತರ: ಭಕ್ತರಿಗೆ ಯಾವಾಗ ದುಃಖವಾಗುತ್ತದೆಯೋ ಆಗ ಹೇ ಭಗವಂತ, ನನ್ನನ್ನು ಈ ದುಃಖದ ಪ್ರಪಂಚದಿಂದ ಕರೆದುಕೊಂಡು ಹೋಗಿ, ಈ ಪತಿತ ಪ್ರಪಂಚದಲ್ಲಿ ನನ್ನ ಅವಶ್ಯಕತೆಯಿಲ್ಲ ಎಂದು ಹೇಳುತ್ತಾರೆ. ತಂದೆಯು ಈ ಕೂಗನ್ನು ಕೇಳಿ ಕರೆದುಕೊಂಡು ಹೋಗಲು ಬರುತ್ತಾರೆಯೋ ಆಗ ಭಕ್ತರು ಅಳುತ್ತಾರೆ. ಇಂತಹ ಔಷದಿಯನ್ನು ಕೊಡಿ ಆದ್ದರಿಂದ ನಾವು ಆರೋಗ್ಯವಂತರಾಗಿಬಿಡಬೇಕೆಂದು ವೈದ್ಯರಿಗೆ ಹೇಳುತ್ತಾರೆ

ಗೀತೆ: ದೂರದೇಶದಲ್ಲಿರುವ ತಂದೆಯು. . . . . . . . ..

ಓಂ ಶಾಂತಿ. ದೂರದೇಶದಲ್ಲಿ ತಂದೆಯು ಇರುತ್ತಾರೆ ಮತ್ತು ನೀವು ಮಕ್ಕಳು ಸಹ ಇರುತ್ತೀರಿ ಈ ತಂದೆಯು ಈಗ ಇಲ್ಲಿಗೆ ಏಕೆ ಬಂದಿದ್ದಾರೆ? ಹೇ ಭಗವಂತನೇ, ಬನ್ನಿ ಬಂದು ನಮ್ಮನ್ನು ಹಿಂತಿರುಗಿ ಕರೆದುಕೊಂಡು ಹೋಗಿ ಎಂದು ಏಕೆ ಕರೆಯುತ್ತಾರೆ? ತಮ್ಮ ಮನೆಯಾದ ಮುಕ್ತಿಧಾಮಕ್ಕೆ ಕರೆದುಕೊಂಡು ಹೋಗಿ ಎಂದು ಆತ್ಮವೇ ಹೇಳುತ್ತದೆ. ತಂದೆಯನ್ನು ಕರೆಯುವುದು ಎಂದರೆ ಕಾಲರಕಾಲನನ್ನು ಕರೆಯುವುದು. ನಮ್ಮನ್ನು ಈ ಪತಿತದ ಪ್ರಪಂಚದ ಸಂಬಂಧದಿಂದ ಬಿಡುಗಡೆ ಮಾಡಿ ಜೊತೆಯಲ್ಲಿ ಕರೆದುಕೊಂಡು ಹೋಗಿ, ನಮಗೆ ಇಲ್ಲಿರುವ ಅವಶ್ಯಕತೆಯಿಲ್ಲ ಎಂದು ಭಕ್ತರು ಭಗವಂತನನ್ನು ಕರೆಯುತ್ತಾರೆ ಆದರೆ ನಾವು ಯಾರನ್ನು ಕರೆಯುತ್ತೇವೆ ಎಂದು ಭಕ್ತಿ ಮಾರ್ಗದಲ್ಲಿ ಅವರಿಗೆ ಅರಿವು ಇಲ್ಲ. ಮತ್ತೆ ಯಾವುದೇ ಆತ್ಮ ಯಾವಾಗ ಶರೀರ ಬಿಡುತ್ತದೆಯೋ ಆಗ ಎಷ್ಟೊಂದು ದುಃಖಿಗಳಾಗುತ್ತಾರೆ, ಅಳುತ್ತಾರೆ. ತಂದೆಯೇ ಬಂದು ನಮ್ಮನ್ನು ಇಲ್ಲಿಂದ ಕರೆದುಕೊಂಡು ಹೋಗಿ ಈ ಶರೀರದಿಂದ ಮುಕ್ತರನ್ನಾಗಿ ಮಾಡಿ ಎಂದು ಒಂದು ಕಡೆ ಕರೆಯುತ್ತಾರೆ ಆದರೆ ಯಾವಾಗ ಮುಕ್ತ ಮಾಡುತ್ತಾರೆಯೋ ಆಗ ಅಳುತ್ತಾ ಚೀರಾಡುತ್ತಾರೆ, ಭಕ್ತಿಮಾರ್ಗದಲ್ಲಿ ಕರೆಯುತ್ತಾರೆ ಆದರೆ ಸರಿಯಾಗಿ ತಿಳಿದುಕೊಳ್ಳುವುದಿಲ್ಲ. ಸಾವಿತ್ರಿ ಸತ್ಯವಾನನ ಕಥೆಯಿದೆ ಅವರೊಂದೇ ಆತ್ಮವನ್ನು ಕರೆದುಕೊಂಡು ಹೋಗುತ್ತಿದ್ದರು ಆದರೆ ಸಾವಿತ್ರಿ ಕರೆದುಕೊಂಡುಹೋಗಲು ಬಿಡುತ್ತಿರಲಿಲ್ಲ. ಮನುಷ್ಯರು ಯಾವಾಗ ಶರೀರಬಿಡುತ್ತಾರೆಯೋ ಆಗ ಶರೀರದ ಮೇಲೆ ಮೋಹವಿರುವ ಕಾರಣ ಆತ್ಮವು ಬಿಡುವುದಕ್ಕೆ ಇಚ್ಚಿಸುವುದಿಲ್ಲ. ನಾವು ಆರೋಗ್ಯವಂತರಾಗಿರುವುದಕ್ಕೆ ಔಷಧಿಯನ್ನು ಕೊಡಿ ಎಂದು ವೈದ್ಯರ ಬಳಿ ಕೇಳುತ್ತಾರೆ. ಶರೀರ ಬಿಡುವುದಕ್ಕೆ ನಮಗೆ ಇಷ್ಟವಿಲ್ಲವೆಂದೂ ಹೇಳುತ್ತಾರೆ ಆದರೆ ಮತ್ತೆ ಕರೆಯುತ್ತಾರೆ -ಭಗವಂತನೇ ಬನ್ನಿ, ಬಂದು ನಮ್ಮನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿ. ಆಶ್ಚರ್ಯದ ಮಾತಾಗಿದೆಯಲ್ಲವೆ. ಈಗ ನೀವು ಖುಷಿಯಿಂದ ಹೊರಡುತ್ತೀರಿ. ಮನುಷ್ಯರಿಗಂತೂ ಪ್ರಪಂಚದಲ್ಲಿ ಮಿತ್ರ-ಸಂಬಂಧಿಗಳ ಜೊತೆ ಮೋಹವಿದೆ. ಈಗ ಕೇಳುತ್ತಾರೆ -ಮಿತ್ರ-ಸಂಬಂಧಿಗಳಿಂದ ಬಿಡಿಸಲೇ? ನಿಮ್ಮನ್ನು ಕರೆದುಕೊಂಡು ಹೋಗುತ್ತೇನೆ ಆದರೆ ನೀವು ಈ ಮಿತ್ರ ಸಂಬಂಧಿಗಳನ್ನು ಮರೆಯಬೇಕು. ಒಂದುವೇಳೆ ಅಂತ್ಯಕಾಲದಲ್ಲಿ ಮಕ್ಕಳು ಅನ್ಯರನ್ನು ಸ್ಮರಣೆ ಮಾಡಿದರೆ ಮತ್ತೆ ಅಂತಹ ಜನ್ಮವೇ ಸಿಕ್ಕಿಬಿಡುತ್ತದೆ. ತಂದೆಯು ಹೇಳುತ್ತಾರೆ - ನೀವಾತ್ಮಗಳನ್ನು ಈ ಶರೀರದಿಂದ ಮುಕ್ತರನ್ನಾಗಿ ಮಾಡಿ ಕರೆದುಕೊಂಡು ಹೊಗುತ್ತೇನೆ ಆದ್ದರೆ ನಿಮ್ಮ ಮಿತ್ರ-ಸಂಬಂಧಗಳ ನೆನಪು ಬರುವುದಿಲ್ಲ ತಾನೆ? ಅಂತ್ಯದಲ್ಲಿ ಒಬ್ಬ ತಂದೆಯನ್ನೆ ನೆನಪು ಮಾಡಬೇಕಾಗಿದೆ. ಪುನರ್ಜನ್ಮದಲ್ಲಂತೂ ಪುನಃ ಇಲ್ಲಿಗೆ ಬರುವುದಿಲ್ಲ ಆದ್ದರಿಂದ ದೇಹಸಹಿತ ಎಲ್ಲವನ್ನೂ ಮರೆಯುತ್ತಾ ಹೋಗಿ ಕೇವಲ ತಂದೆಯಾದ ನನ್ನೊಬ್ಬನನ್ನೇ ನೆನಪು ಮಾಡುತ್ತಿರಬೇಕಾಗಿದೆ. ಎಲ್ಲಿಯವರೆಗೆ ನೀವು ಪವಿತ್ರರಾಗುವುದಿಲ್ಲವೋ ಅಲ್ಲಿಯವರೆಗೆ ನಿಮ್ಮನ್ನು ಕರೆದುಕೊಂಡು ಹೋಗಲು ಸಾಧ್ಯವಿಲ್ಲ. ಈಗ ನಾನು ನೀವಾತ್ಮರನ್ನು ಕರೆದುಕೊಂಡು ಹೋಗಲು ಬಂದಿದ್ದೇನೆ ಆದರೆ ನಿಮ್ಮ ಮೇಲೆ ವಿಕರ್ಮಗಳ ಹೊರೆಯು ಬಹಳಷ್ಟಿದೆ ಎಂದು ತಂದೆಯು ಆತ್ಮಗಳೊಂದಿಗೆ ಮಾತನಾಡುತ್ತಿದ್ದಾರೆ. ತಂದೆಯು ಪರಮಧಾಮದಿಂದ ಪರದೇಶದಲ್ಲಿ ಬಂದಿದ್ದಾರೆ. ತಮ್ಮ ದೇಶ ಯಾವ ಸ್ವರ್ಗವನ್ನು ಅವರು ಸ್ಥಾಪನೆ ಮಾಡುತ್ತಾರೆಯೋ ಆ ಸ್ವರ್ಗದಲ್ಲಿ ಅವರು ಬರುವುದಿಲ್ಲ. ಇಲ್ಲಿ ನೀವು ದುಃಖಿಯಾಗಿ ಕರೆಯುತ್ತೀರಿ. ನಾನಂತೂ ಒಂದೇ ಸಮಯದಲ್ಲಿ ಬಂದು ಎಲ್ಲಾ ಆತ್ಮಗಳನ್ನು ಹಿಂತಿರುಗಿ ಕರೆದುಕೊಂಡು ಹೊಗಬೇಕಾಗಿದೆ. ಭಲೆ ನೀವು ಖುಷಿಯಿಂದಲಾದರೂ ನಡೆಯಿರಿ, ಬೇಸರದಿಂದಾದರೂ ನಡೆಯಿರಿ ಅಂತೂ ಅವಶ್ಯವಾಗಿ ಹೋಗಬೇಕಾಗಿದೆ ಎಂದು ತಂದೆಯು ತಿಳಿಸುತ್ತಾರೆ. ಬೇಹದ್ದಿನ ಕಾಲರಕಾಲ ತಂದೆಯು ಆತ್ಮಗಳನ್ನು ಹಿಂತಿರುಗಿ ಕರೆದುಕೊಂಡು ಹೋಗುತ್ತಾರೆ ಅಂದರೆ ಎಲ್ಲಾ ಮನುಷ್ಯರ ವಿನಾಶ ಮಾಡಲು ಬರುತ್ತಾರೆಂದರ್ಥ. ಪತಿ-ಪತ್ನಿಯಿರುತ್ತಾರೆಂದರೆ ಪತಿಯು ಶರೀರ ಬಿಟ್ಟಾಗ ಪತ್ನಿ ಎಷ್ಟೊಂದು ಆಳುತ್ತಾಳೆ. ನಮ್ಮನ್ನು ಕರೆದುಕೊಂಡು ಹೋಗಿ, ನಮಗೆ ಇಲ್ಲಿ ಏನೂ ಬೇಕಿಲ್ಲವೆಂದು ಈಗ ಹೇಳುತ್ತಾರೆ. ಆದರೆ ನೀವು ಪತಿತರನ್ನು ಕರೆದುಕೊಂಡು ಹೋಗಲು ಸಾಧ್ಯವಿಲ್ಲ. ಆದ್ದರಿಂದ ಪಾವನರನ್ನಾಗಿ ಮಾಡಲು ಬಂದಿದ್ದೇನೆ. ಯಾವಾಗ ತಮ್ಮನ್ನು ಅಶರೀರಿ ಎಂದು ತಿಳಿಯುತ್ತೀರೋ ಆಗ ಪಾವನರಾಗುತ್ತೀರಿ. ದೇಹ ಸಹಿತವಾಗಿ ದೇಹದ ಎಲ್ಲಾ ಸಂಬಂಧಗಳನ್ನು ಮರೆಯುತ್ತೀರಿ. ತಂದೆಯಾದ ನನ್ನೊಬ್ಬನನ್ನೇ ನೆನಪು ಮಾಡುತ್ತೀರೆಂದರೆ ನಿಮ್ಮ ವಿಕರ್ಮಗಳೆಲ್ಲವೂ ವಿನಾಶವಾಗುತ್ತದೆ.

ಕಲ್ಪ-ಕಲ್ಪವೂ ಸಹ ಬಹಳ ಚೆನ್ನಾಗಿ ಯುಕ್ತಿಗಳನ್ನು ತಿಳಿಸುತ್ತೇನೆ. ನಿಮಗೆ ಗೊತ್ತಿದೆ - ಈ ಎಲ್ಲಾ ಶರೀರಗಳು ಸುಟ್ಟುಹೋಗುತ್ತವೆ ಹೇಗೆ ಹೋಲಿ ಮಾಡಿದಾಗ ಅದರಲ್ಲಿ ಎಲ್ಲವೂ ಸುಡುತ್ತದೆ ಆದರೆ ದಾರವು ಸುಡುವುದಿಲ್ಲ, ಹಾಗೆಯೇ ಆತ್ಮವು ಸುಡುವುದಿಲ್ಲ. ಉಳಿದಂತೆ ಈ ಬಿದಿರಿನ ಕಾಡಿಗೆ ಬೆಂಕಿ ಬೀಳುವುದಿದೆ. ಎಲ್ಲಾ ಶರೀರಗಳು ಸುಟ್ಟು ಭಸ್ಮವಾಗಿಬಿಡುತ್ತದೆ ಮತ್ತು ಆತ್ಮವು ಶುದ್ಧವಾಗಿಬಿಡುವುದು.

ಆತ್ಮಗಳು ಶುದ್ಧವಾಗಲು ನಿರಂತರ ದೇಹೀ ಅಭಿಮಾನಿಗಳಾಗುವ ಪುರುಷಾರ್ಥ ಮಾಡಬೇಕು. ದೇಹವಿದ್ದರೂ ಸಹ ತಾವು ಆತ್ಮನೆಂದು ತಿಳಿದು ತಂದೆಯ ಜೊತೆ ಯೋಗವನ್ನು ಜೋಡಿಸಿ. ಹೇಗೆ ಸನ್ಯಾಸಿಗಳು ಬ್ರಹ್ಮ ತತ್ವದೊಂದಿಗೆ ಯೋಗವನ್ನು ಜೋಡಿಸುತ್ತಾರೆ. ನಾವು ತತ್ವದಲ್ಲಿ ಲೀನವಾಗಿಬಿಡುತ್ತೇವೆ ಎಂದು ಹೇಳುತ್ತಾರೆ. ತತ್ವದೊಂದಿಗೆ ಬುದ್ಧಿಯೋಗವು ಜೋಡಣೆಯಾಗುತ್ತದೆ ಆದರೆ ಶರೀರವನ್ನು ಬಿಟ್ಟುಬಿಡುತ್ತಾರೆಂದಲ್ಲ. ತತ್ವದೊಂದಿಗೆ ನಾವು ಯೋಗವನ್ನು ಜೋಡಿಸುತ್ತಾ-ಜೋಡಿಸುತ್ತಾ ಬ್ರಹ್ಮ ತತ್ವದಲ್ಲಿಯೇ ಲೀನವಾಗಿಬಿಡುತ್ತೇವೆ ಎಂದು ತಿಳಿಯುತ್ತಾರೆ ಆದ್ದರಿಂದ ನಾವು ಅವರನ್ನು ಬ್ರಹ್ಮ ಜ್ಞಾನಿಗಳು, ತತ್ವಜ್ಞಾನಿಗಳೆಂದು ಹೇಳುತ್ತೇವೆ. ತತ್ವದ ಜ್ಞಾನವಿದೆ. ನಾವಾತ್ಮಗಳು ತತ್ವದಲ್ಲಿರುತ್ತೇವೆಂದು ನಿಮಗೆ ಜ್ಞಾನವಿದೆ. ಆ ತತ್ವದಲ್ಲಿ ನಾವು ಲೀನವಾಗಿಬಿಡುತ್ತೇವೆಂದು ಅವರು ತಿಳಿಯುತ್ತಾರೆ. ಒಂದುವೇಳೆ ನಾವು ಅಲ್ಲಿ ಹೋಗಿ ಇರುತ್ತೇವೆಂದರೂ ಸಹ ಆ ಮಾತನ್ನು ಒಪ್ಪಬಹುದು ಆದರೆ ಆತ್ಮವು ಲೀನವಂತೂ ಆಗುವುದಿಲ್ಲ. ನೀರುಗುಳ್ಳೆಯ ಉದಾರಹಣೆಯನ್ನು ಕೊಡುತ್ತಾರೆ. ಆದರೆ ಅದೂ ಸಹ ತಪ್ಪಾಗಿದೆ. ಜ್ಯೋತಿಯಲ್ಲಿ ಲೀನವಾಗುವ ಮಾತೇ ಇಲ್ಲ. ಅವಿನಾಶಿ ಆತ್ಮನಲ್ಲಿ ಎಲ್ಲಾ ಪಾತ್ರವು ತುಂಬಲ್ಪಟ್ಟಿದೆ ಅದು ಎಂದೂ ವಿನಾಶವಾಗಲು ಸಾಧ್ಯವಿಲ್ಲ. ಸನ್ಯಾಸಿಗಳು ವಿಕಾರಗಳ ಸನ್ಯಾಸ ಮಾಡುತ್ತಾರೆ ಆದರೆ ಹಿಂತಿರುಗಿ ಅಂತೂ ಯಾರೂ ಹೋಗುವುದಿಲ್ಲ. ಇಲ್ಲಿಯೇ ಪುನರ್ಜನ್ಮವನ್ನು ಎಲ್ಲರೂ ತೆಗೆದುಕೊಳ್ಳುತ್ತಿರುತ್ತಾರೆ, ವೃದ್ಧಿಯಾಗುತ್ತಾ ಹೋಗುತ್ತದೆ ಎಲ್ಲರು ಸತೋ, ರಜೋ, ತಮೋದಿಂದ ಪಾರಾಗಬೇಕಾಗಿದೆ. ನಾಟಕದಲ್ಲಿ ಎಲ್ಲವೂ ನಿಗಧಿಯಾಗಿದೆ. ಈಗಂತೂ ನೋಡಿ -ಎಷ್ಟು ಅನೇಕ ಪ್ರಕಾರದ ಕಾಯಿಲೆಗಳು ಬರುತ್ತದೆ, ಮೊದಲು ಇಷ್ಟೊಂದು ಇರಲಿಲ್ಲ. ನಾಟಕದಲ್ಲಿ ಎಲ್ಲವೂ ನಿಗಧಿಯಾಗಿದೆ. ನೀವು ಮಕ್ಕಳಿಗೆ ಗೊತ್ತಿದೆ - ತಂದೆಯು ಎಲ್ಲಾ ಆತ್ಮಗಳನ್ನು ಹಿಂತಿರುಗಿ ಕರೆದುಕೊಂಡು ಹೋಗಿ ಎಂದು ಎಲ್ಲರೂ ಹೇಳುತ್ತಾರೆ. ಮುಕ್ತಿ-ಜೀವನ್ಮುಕ್ತಿಯಂತೂ ಎಲ್ಲರಿಗೂ ಸಿಗಬೇಕಾಗಿದೆ ಆದರೆ ಎಲ್ಲರೂ ಸತ್ಯಯುಗದಲ್ಲಿ ಬರಲು ಸಾಧ್ಯವಿಲ್ಲ. ಯಾರು ಯಾವ ಸಮಯದಲ್ಲಿ ಬರುತ್ತಾರೋ ಅವರು ಅದೇ ಸಮಯದಲ್ಲಿ ಆ ಧರ್ಮದಲ್ಲಿಯೇ ಬರಬೇಕಾಗುತ್ತದೆ. ಈ ಧರಣಿಗೆ ಎಷ್ಟೊಂದು ಗೊಬ್ಬರವು ಸಿಗುತ್ತದೆ ಹೊಸ ಪ್ರಪಂಚಕ್ಕೂ ಗೊಬ್ಬರ ಬೇಕಲ್ಲವೇ ಆದ್ದರಿಂದ ಎಲ್ಲಾ ಮನುಷ್ಯರು, ಪ್ರಾಣಿ ಮುಂತಾದುವುಗಳೆಲ್ಲವೂ ಸಮಾಪ್ತಿಯಾಗಿ ಗೊಬ್ಬರವಾಗಿಬಿಡುತ್ತವೆ ನಂತರ ಸತ್ಯಯುಗದಲ್ಲಿ ಈ ಧರಣಿಯು ಎಷ್ಟು ಒಳ್ಳೆಯ ದವಸ-ಧಾನ್ಯ, ಫಲಗಳನ್ನು ಕೊಡುತ್ತವೆ. ಅದನ್ನು ನೀವು ಸಾಕ್ಷಾತ್ಕಾರದಲ್ಲಿಯೂ ನೋಡಿದ್ದೀರಿ.

ನೀವು ಮಕ್ಕಳು ತಿಳಿದುಕೊಂಡಿದ್ದೀರಿ - ತಂದೆಯು ಕಾಲರಕಾಲನಾಗಿದ್ದಾರೆ. ಅದರಿಂದಲೇ ಎಲ್ಲರೂ ಹೇಳುತ್ತಾರೆ, ನಾವು ಖುಷಿಯಿಂದ ನಿಮ್ಮ ಜೊತೆಯಲ್ಲಿ ಬರುತ್ತೇವೆ, ನಮ್ಮನ್ನು ಕರೆದುಕೊಂಡು ಹೋಗಿ ನಮಗೆ ಇಲ್ಲಿ ಬಹಳ ದುಃಖವಿದೆ, ಇದು ದುಃಖ ಕೊಡುವ ಪ್ರಪಂಚವೇ ಆಗಿದೆ. ದುಃಖಧಾಮದಲ್ಲಿ ಒಬ್ಬರು ಇನ್ನೊಬ್ಬರಿಗೆ ದುಃಖವನ್ನು ಕೊಡುತ್ತಿರುತ್ತಾರೆ. ಅಪಾರ ದುಃಖವಿದೆ ಆದ್ದರಿಂದ ನಾನೀಗ ಸುಖದಲ್ಲಿ ಕರೆದುಕೊಂಡು ಹೋಗಲು ಬಂದಿದ್ದೇನೆ. ಈಗ ಒಬ್ಬರನ್ನು ನೆನಪು ಮಾಡಿದರೆ ಆಸ್ತಿಯನ್ನು ಪಡೆಯುತ್ತೀರಿ ಇಲ್ಲವೆಂದರೆ ರಾಜಧಾನಿಯ ಪೂರ್ಣ ಆಸ್ತಿಯನ್ನು ಪಡೆಯಲು ಸಾಧ್ಯವಿಲ್ಲ ನಂತರ ಪ್ರಜೆಗಳಲ್ಲಿ ಹೊರಟುಹೋಗುತ್ತೀರೆಂದು ತಂದೆಯು ತಿಳಿಸುತ್ತಾರೆ. ತಂದೆಯು ಬಂದು ರಾಜ್ಯಭಾಗ್ಯದ ಸುಖವನ್ನು ಕೊಡುತ್ತಾರೆ, ಮತ್ಯಾವುದೇ ಧರ್ಮಸ್ಥಾಪಕರು ರಾಜಧಾನಿಯ ಸ್ಥಾಪನೆ ಮಾಡುವುದಿಲ್ಲ. ಇವರಂತೂ ಗುಪ್ತವೇಷದಲ್ಲಿ ರಾಜಧಾನಿಯನ್ನು ಸ್ಥಾಪನೆ ಮಾಡುತ್ತಿದ್ದಾರೆ. ಸತ್ಯಯುಗದಲ್ಲಿ ಲಕ್ಷ್ಮಿ-ನಾರಾಯಣರ ರಾಜಧಾನಿಯು ಹೇಗೆ ಸ್ಥಾಪನೆಯಾಯಿತು? ಇದು ಯಾರಿಗೂ ಗೊತ್ತಿಲ್ಲ. ಶರೀರಧಾರಿ ದೇವತೆಗಳು ಎಲ್ಲಿಂದ ಬಂದರು? ಯಾವಾಗ ಕಲಿಯುಗದಲ್ಲಿ ಅಸುರರಿದ್ದರು, ಅಸುರರು ಮತ್ತು ದೇವತೆಗಳ ಯುದ್ಧವಂತೂ ಮಾಡಲಿಲ್ಲ. ಯುದ್ಧದ ಮಾತೂ ಇಲ್ಲ, ವಿಕಾರದ ಕಠಾರಿಯೂ ನಡೆಯುವುದಿಲ್ಲ, ಹಾಗಾದರೆ ಯುದ್ಧವಾಯಿತೆಂದು ಏಕೆ ತೋರಿಸುವರು,ಗೊಂದಲದಲ್ಲಿದ್ದಾರೆ. ಸೃಷ್ಟಿಯು ಅದೇ ಇರುತ್ತದೆ ಕೇವಲ ಸಮಯ ಬದಲಾವಣೆಯಾಗುತ್ತದೆ. ಇದಾಗಿದೆ ಬೇಹದ್ದಿನ ದಿನ ಹಾಗೂ ಬೇಹದ್ದಿನ ರಾತ್ರಿ. ಸತ್ಯಯುಗ-ತ್ರೇತಾಯುಗ ದಿನ ಎಂದು ಹೇಳಲಾಗುತ್ತದೆ ಅಲ್ಲಿ ಯುದ್ಧವಂತೂ ಆಗುವುದಿಲ್ಲ. ಆದರೆ ಆ ರಾಜಧಾನಿಯು ಅವರಿಗೆ ಹೇಗೆ ಸಿಕ್ಕಿತು? ಕಲಿಯುಗದಲ್ಲಂತೂ ರಾಜಧಾನಿಯಿರಲಿಲ್ಲ. ಆದ್ದರಿಂದಲೇ ಬಾಬಾ, ತಮ್ಮ ಸ್ಥಾಪನೆಯ ಕರ್ತವ್ಯವು ವಿಚಿತ್ರವಾಗಿದೆ ಎಂದು ಮಕ್ಕಳು ಹೇಳುತ್ತಾರೆ ಏಕೆಂದರೆ ಇಷ್ಟೊಂದು ಮಕ್ಕಳನ್ನು ಸುಖಿಯನ್ನಾಗಿ ಮಾಡುತ್ತಾರೆ ಆದರೆ ತಮ್ಮ-ತಮ್ಮ ಪುರುಷಾರ್ಥದನುಸಾರ ಶ್ರೇಷ್ಠ ಪದವಿಯನ್ನು ಪಡೆಯಬಹುದು. ನಿಮಗೆ ಗೊತ್ತಿದೆ, 5000 ವರ್ಷಗಳ ನಂತರ ಪರಮಪಿತ ಪರಮಾತ್ಮ ಬರುತ್ತಾರೆ. ಭಲೆ ಕೆಲವರು ಪ್ರಭು, ಇನ್ನೂ ಕೆಲವರು ಭಗವಂತ ಎಂದು ಹೇಳುತ್ತಾರೆ ಆದರೆ ಎಲ್ಲರಿಗೆ ತಂದೆಯಂತೂ ಆಗಿದ್ದಾರಲ್ಲವೆ. ತಂದೆಯೆಂದು ಹೇಳುವುದು ಎಷ್ಟು ಚೆನ್ನಾಗಿದೆ, ಈಶ್ವರನು ನಮ್ಮ ತಂದೆಯಾಗಿದ್ದಾರೆ ಕೇವಲ ಪ್ರಭು ಎಂದು ಹೇಳುವುದರಿಂದ ಇಷ್ಟು ಮಜಾ ಇರುವುದಿಲ್ಲ. ಪರಮಾತ್ಮ ಎಂದು ಹೇಳುವುದರಿಂದ ಸರ್ವವ್ಯಾಪಿ ಎಂದು ತಿಳಿದುಕೊಳ್ಳುತ್ತಾರೆ ಆದರೆ ತಂದೆ ಎಂದು ಹೇಳಿದಾಗ ಸರ್ವವ್ಯಾಪಿ ಎನ್ನಲು ಸಾಧ್ಯವಿಲ್ಲ.

ಈಗ ನೀವಾತ್ಮಗಳು ಕೇಳುತ್ತಿದ್ದೀರಿ ನಮ್ಮ ತಂದೆಯು ನಮ್ಮನ್ನು ಯೋಗದಿಂದ ಪವಿತ್ರರನ್ನಾಗಿ ಮಾಡುತ್ತಿದ್ದಾರೆಂದು ತಿಳಿಯುತ್ತೀರಿ ಅಂದಮೇಲೆ ತಂದೆ, ಶಿಕ್ಷಕ, ಸದ್ಗುರುವನ್ನು ನೆನಪು ಮಾಡಬೇಕು. ಇಲ್ಲಿ ಮಕ್ಕಳಿಗೆ ಸಮ್ಮುಖದಲ್ಲಿದ್ದಾಗ ಅನುಭವವಾಗುತ್ತದೆ - ನಾವಂತೂ ಆತ್ಮಗಳಾಗಿದ್ದೇವೆ, ಈ ಶರೀರದೊಂದಿಗೆ ಪಾತ್ರವನ್ನಭಿನಯಿಸುತ್ತೇವೆ. ತಂದೆಯು ನಮ್ಮನ್ನು ಕರೆದುಕೊಂಡು ಹೋಗಲು ಬಂದಿದ್ದಾರೆ, ನಾವು ತಂದೆಯೊಂದಿಗೆ ಬುದ್ಧಿಯೋಗವನ್ನಿಡುವ ಪುರುಷಾರ್ಥವನ್ನು ಮಾಡುತ್ತೇವೆ. ತಂದೆಯನ್ನು ನೆನಪು ಮಾಡುತ್ತಾ-ಮಾಡುತ್ತಾ ತಂದೆಯ ಬಳಿಗೆ ಹೋಗುತ್ತೇವೆ. ಕೆಲವು ಸನ್ಯಾಸಿಗಳು ಯಾರು ಬಹಳ ಉತ್ತಮರಾಗಿರುತ್ತಾರೆಯೋ ಅವರೂ ಸಹ ಈ ರೀತಿ ಕುಳಿತು-ಕುಳಿತಿದ್ದಂತೆಯೇ ಶರೀರವನ್ನು ಬಿಟ್ಟುಬಿಡುತ್ತಾರೆ. ನಾನಾತ್ಮನು ಹೋಗಿ ಬ್ರಹ್ಮ ತತ್ವದಲ್ಲಿ ಲೀನವಾಗಿಬಿಡುತ್ತೇವೆಂದು ತಿಳಿಯುತ್ತಾರೆ. ಎಲ್ಲರೂ ಮೋಕ್ಷ ಅಥವಾ ಮುಕ್ತಿಗಾಗಿಯೇ ಪುರುಷಾರ್ಥ ಮಾಡುತ್ತಾರೆ ಏಕೆಂದರೆ ಸಂಸಾರದಲ್ಲಿ ಬಹಳ ದುಃಖವಿದೆ ಆದ್ದರಿಂದ ಮೋಕ್ಷ ಅಥವಾ ಮುಕ್ತಿಯನ್ನು ಬಯಸುತ್ತಾರೆ ಆದರೆ ಅವರಿಗೆ ಈ ಪ್ರಪಂಚದ ಚಕ್ರವು ಸುತ್ತುತ್ತದೆ, ನಮ್ಮ ಪಾತ್ರವು ಅವಶ್ಯವಾಗಿ ಅವಿನಾಶಿಯಾಗಿರಬೇಕು ಎಂದು ಗೊತ್ತಿರುವುದಿಲ್ಲ.

ನಿಮ್ಮ ಬುದ್ಧಿಯು ಜಿನ್ನನ ರೀತಿಯಿರಬೇಕು. ಜಿನ್ ರಾಕ್ಷಸನ ಕಥೆಯನ್ನು ಹೇಳುತ್ತಾರಲ್ಲವೆ. ನನಗೆ ಕೆಲಸ ಕೊಡದಿದ್ದರೆ ನಾನು ನಿಮ್ಮನ್ನೇ ತಿಂದುಬಿಡುತ್ತೇನೆಂದು ಹೇಳಿದನು ನಂತರ ಅವನಿಗೆ ಏಣಿಯನ್ನು ಹತ್ತುವ ಇಳಿಯುವ ಕೆಲಸ ಕೊಟ್ಟರು. ನಿಮಗೂ ಸಹ ತಂದೆಯು ತಿಳಿಸುತ್ತಾರೆ - ನನ್ನ ಜೊತೆ ಬುದ್ಧಿಯೋಗವನ್ನಿಡಿ ಇಲ್ಲದಿದ್ದರೆ ಮಾಯಾರೂಪೀ ಜಿನ್ ತಿಂದುಬಿಡುವುದು. ಮಾಯೆಯು ಜಿನ್ ಆಗಿದೆ, ಯೋಗ ಮಾಡಲು ಬಿಡುವುದಿಲ್ಲ. ಒಳ್ಳೊಳ್ಳೆಯ ಶಕ್ತಿಶಾಲಿ ಸಾಹಸವಂತ ಮಕ್ಕಳನ್ನೂ ಸಹ ಮಾಯೆಯು ಹಸಿಯಾಗಿಯೇ ತಿಂದುಬಿಡುತ್ತದೆ. ನಿಮಗೆ ಗೊತ್ತಿದೆ - ತಂದೆಯು ಕಲಿಸಲು ಬಂದಿದ್ದಾರೆ. ತಿಳಿಸುತ್ತಾರೆ - ಮಕ್ಕಳೇ, ಈಗ ಸಮ್ಮುಖದಲ್ಲಿ ಬಂದಿದ್ದೇನೆ. ಈಗ ನನ್ನನ್ನು ನೆನಪು ಮಾಡಿ ಇಲ್ಲದಿದ್ದರೆ ಮಾಯಾಜಿನ್ ತಿಂದುಬಿಡುತ್ತದೆ. ಈ ಕೆಲಸವನ್ನು ನಿಮ್ಮ ಕಲ್ಯಾಣಕ್ಕಾಗಿಯೇ ಕೊಡಲಾಗುತ್ತದೆ. ನೀವು ವಿಶ್ವದ ಮಾಲೀಕರಾಗಿಬಿಡುತ್ತೀರಿ. ತಮ್ಮನ್ನು ಆತ್ಮನೆಂದು ತಿಳಿಯಬೇಕಾಗಿದೆ. ನೀವು ವಿಶ್ವದ ಮಾಲೀಕರಾಗಿಬಿಡುತ್ತಿರಿ. ತಮ್ಮನ್ನು ಆತ್ಮನೆಂದು ತಿಳಿದು ಶರೀರದ ಪರಿವೆಯನ್ನು ಬಿಡಬೇಕಾಗಿದೆ ಸನ್ಯಾಸ ಅಂದರೆ ದೇಹ ಸಹಿತ ಎಲ್ಲವೂ ಸನ್ಯಾಸ. ಬಾಕಿ ನಿಮ್ಮನ್ನು ನೀವು ಆತ್ಮನೆಂದು ತಿಳಿಯಬೇಕು-ತಂದೆಯು ಜ್ಞಾನ ಮತ್ತು ಯೋಗಬಲದಿಂದ ನಮ್ಮನ್ನು ದೇವಿ-ದೇವತೆಗಳನ್ನಾಗಿ ಮಾಡುತ್ತಾರೆ ಎಂದು ನಿಮಗೆ ತಿಳಿದಿದೆ. ರಾಜಧಾನಿಯು ಸ್ಥಾಪನೆಯಾಗುತ್ತಿದೆ ಇದು ರಾಜಯೋಗವಾಗಿದೆ ಈ ಮಾತುಗಳು ಶಾಸ್ತ್ರಗಳಲ್ಲಿ ಇಲ್ಲ, ಪಾಂಡವರು ಇಷ್ಟೊಂದು ರಾಜಯೋಗವನ್ನು ಕಲಿತರು ನಂತರ ಏನಾಯಿತು? ಬೆಟ್ಟದ ಮೇಲೆ ಹೋಗುತ್ತಾ ಕರಗಿಹೋದರ? ಅಷ್ಟೇ ಆದರೆ ರಾಜಧಾನಿಯು ಸ್ಥಾಪನೆಯಾಯಿತೆಂದು ಹೇಗೆ ತಿಳಿಯುತ್ತದೆ? ಈಗ ಮಾತುಗಳನ್ನು ನೀವು ಅರ್ಥ ಮಾಡಿಕೊಳ್ಳುತ್ತೀರಿ. ತಂದೆಯು ತಿಳಿಸುತ್ತಾರೆ-ಈಗ ನನ್ನನ್ನು ನೆನಪು ಮಾಡಿ ಮತ್ತು ಟ್ರಸ್ಟಿಯಾಗಿ ಶ್ರೀಮತದನುಸಾರ ನಡೆಯಿರಿ. ಪ್ರತಿಯೊಂದು ಮಾತಿನಲ್ಲೂ ಸಲಹೆಯನ್ನು ತೆಗೆದುಕೊಳ್ಳುತ್ತಾ ಇರಿ. ಮಕ್ಕಳು ಮುಂತಾದವರ ವಿವಾಹ ಮಾಡಬೇಕೆಂದರೆ ಭಲೆ ಮಾಡಿ, ಬೇಡವೆಂದೇನೂ ಹೇಳುವುದಿಲ್ಲ. ಪ್ರತಿಯೊಬ್ಬರ ಲೆಕ್ಕಾಚಾರ ಬೇರೆಯೇ ಇರುತ್ತದೆ. ಯಾವ ಮಕ್ಕಳು ಹೇಗೆ ಹೇಗೆ ಇರುತ್ತಾರೋ, ಅವರ ಲೆಕ್ಕಾಚಾರ ನೋಡಿ ಸಲಹೆ ನೀಡಲಾಗುತ್ತದೆ. ಹೇಳುತ್ತಾರೆ ಮಕ್ಕಳಿಗೆ ಮದುವೆ ಮಾಡಿಸಬೇಕು ಎಂದು ಭಲೇ ಮಾಡಿ. ನಿಮ್ಮ ಬಳಿ ಹಣವಿದೆ ಅಂದರೆ ಭಲೇ ಮನೆಕಟ್ಟಿಸಿ ನಿಷೇಧವಿಲ್ಲ. ಮನೆಕಟ್ಟಿಸಿ, ಮಕ್ಕಳ ವಿವಾಹ ಮುಂತಾದುವುಗಳನ್ನು ಮಾಡಿ ಲೆಕ್ಕಾಚಾರಗಳನ್ನು ಚುಕ್ತು ಮಾಡಿ.

ಈಗ ಯಾರು ಒಳ್ಳೆಯ ಪದವಿಯನ್ನು ಪಡೆಯಹುದೆಂದು ತಿಳಿದುಕೊಳ್ಳಬಹುದು ಅದಕ್ಕೆ ಪರಿಶ್ರಮವಾಗಿದೆ. ಇದರಲ್ಲಿ ಬಹಳ ದೂರಾಂದೇಶಿ ಬುದ್ಧಿಯು ಬೇಕು. ರಾಜ್ಯಪದವಿಯನ್ನು ಪಡೆಯುವುದು ಕಡಿಮೆ ಮಾತೇನು! ನಿಮ್ಮ ಕರ್ತವ್ಯಗಳನ್ನೆಲ್ಲಾ ಮುಗಿಸಿ,ಮಕ್ಕಳ ಮುಂತಾದವರ ಲೆಕ್ಕಾಚಾರವನ್ನು ಸಮಾಪ್ತಿ ಮಾಡಿಕೊಂಡು ನಂತರ ಅವರಿಂದ ಬಿಡುಗಡೆ ಹೊಂದಿರಿ. ಯಾರೊಂದಿಗಾದರೂ ಲೆಕ್ಕಾಚಾರವಿದ್ದು, ಸಾಲ ಮುಂತಾದುವುಯಿದ್ದರೆ ಮೊದಲು ಅದನ್ನು ತೀರಿಸಿ. ಇವೂ ಸಹ ತಿಳಿದುಕೊಳ್ಳುವ ಮಾತುಗಳಾಗಿವೆ. ಕನ್ಯೆಯರಿಗೆ ಯಾವುದೇ ಹೊರೆಯಿರುವುದಿಲ್ಲ. ರಚೈತನಾದವನು ತನ್ನ ಎಲ್ಲಾ ಕೆಲಸಗಳನ್ನು ಸಮಾಪ್ತಿ ಮಾಡಿಕೊಳ್ಳಬೇಕಾಗಿದೆ. ನಂತರ ತಂದೆಯನ್ನು ವಾರಸುಧಾರನನ್ನಾಗಿ ಮಾಡಿಕೊಳ್ಳಬಹುದು. ಮಾಯೆಯೂ ಸಹ ಚೆನ್ನಾಗಿ ಸತಾಯಿಸುತ್ತದೆ ಆದರೆ ನೀವು ಇದನ್ನೂ ಸಹ ತಿಳಿದುಕೊಳ್ಳುತ್ತೀರಿ ಬಾಬಾ ಅಂತೂ ಬಹಳ ಮಧುರರಾಗಿದ್ದಾರೆ ಎಲ್ಲರನ್ನು ಪವಿತ್ರರನ್ನಾಗಿ ಮಾಡಿ ವಾಪಸ್ಸು ಕರೆದುಕೊಂಡು ಹೋಗಲು ಬಂದಿದ್ದಾರೆ. ಇಂತಹ ತಂದೆಯೊಂದಿಗೆ ಬಹಳ ಪ್ರೀತಿಯಿರಬೇಕು. ಮನೆಗೆ ಹಿಂತಿರುಗಿ ಕರೆದುಕೊಂಡು ಹೋಗಲು ಬಂದಿದ್ದಾರೆ. ಇಂತಹ ತಂದೆಯೊಂದಿಗೆ ಬಹಳ ಪ್ರೀತಿಯಿರಬೇಕು. ಏಕೆಂದರೆ ಮಧುರ ರಾಗಿದ್ದಾರಲ್ಲವೆ. ಸತ್ಯಯುಗದಲ್ಲಿ ಅಪಾರ ಸುಖವಿರುವ ಕಾರಣ ಸ್ವರ್ಗವನ್ನು ಎಲ್ಲರೂ ನೆನಪು ಮಾಡುತ್ತಾರೆ. ಯಾರಾದರೂ ಶರೀರ ಬಿಟ್ಟರೆ ಸ್ವರ್ಗಕ್ಕೆ ಹೋದರೆಂದು ಹೇಳುತ್ತಾರೆ. ಎಷ್ಟೊಂದು ಮಧುರ ಹೆಸರಾಗಿದೆ! ಯಾವುದು ಕಳೆದುಹೋಗುತ್ತದೆಯೋ ಅದರ ಹೆಸರು ನಂತರ ಭಕ್ತಿಮಾರ್ಗದಲ್ಲಿ ಪ್ರಸಿದ್ಧವಾಗುತ್ತದೆ. ಸತ್ಯಯುಗ, ತ್ರೇತಾದಲ್ಲಂತೂ ಈ ಮಾತುಗಳಿರುವುದಿಲ್ಲ ಅಂದಾಗ ತಂದೆಯು ಜಿನ್ ಕೆಲಸವನ್ನು ಕೊಟ್ಟುಬಿಟ್ಟಿದ್ದಾರೆ - ತಮ್ಮನ್ನು ಆತ್ಮನೆಂದು ತಿಳಿದು ನನ್ನನ್ನು ನೆನಪು ಮಾಡಿ ಇಲ್ಲದಿದ್ದರೆ ಮಾಯಾರೂಪಿ ಜಿನ್ ನಿಮ್ಮನ್ನು ತಿಂದುಬಿಡುವುದು ಆದ್ದರಿಂದ ನೆನಪು ಮಾಡಬೇಕು. ಆತ್ಮ ನಿಶ್ಚಯ ಮಾಡಿಕೊಂಡು ತಂದೆಯನ್ನು ನೆನಪು ಮಾಡಬೇಕು. ಹಾ! ಶರೀರ ನಿರ್ವಹಣಾರ್ಥ ಕರ್ಮವನ್ನಂತೂ ಮಾಡಲೇಬೇಕು. 8 ಗಂಟೆ ಸಮಯವಂತೂ ಶರೀರ ನಿರ್ವಹಣಾರ್ಥ ಬೇಕು ಏಕೆಂದರೆ ನೀವು ಕರ್ಮಯೋಗಿಗಳಾಗಿದ್ದಿರಿ ನಂತರ ನೀವು ಪುರುಷಾರ್ಥ ಮಾಡಿ

8 ಗಂಟೆ ನಿಮ್ಮ ಪುರುಷಾರ್ಥಕ್ಕಾಗಿಯೂ ತೆಗೆಯಿರಿ. ತಮ್ಮನ್ನು ಈ ರೀತಿ ತಿಳಿಯಿರಿ - ನಾವು ತಂದೆಯ ಮಕ್ಕಳಾಗಿಬಿಟ್ಟೆವು. ಈ ಶರೀರವಂತೂ ಹಳೆಯದಾಗಿದೆ, ಇದರಿಂದ ಮಮತ್ವವನ್ನು ತೆಗೆಯಬೇಕಾಗಿದೆ. ಮಮತ್ವವು ಕಳೆಯುತ್ತಾ-ಕಳೆಯುತ್ತಾ, ನೆನಪು ಮಾಡುತ್ತಾ-ಮಾಡುತ್ತಾ ಒಂದುವೇಳೆ ಯಾರ ಮಮತ್ವವಾದರೂ ಉಳಿದುಕೊಂಡರೆ ರಾಜಭಾಗ್ಯವನ್ನು ಪಡೆಯಲು ಸಾಧ್ಯವಿಲ್ಲ. ವಿಶ್ವದ ಮಾಲೀಕರಾಗುವುದರಲ್ಲಿ ಪರಿಶ್ರಮಬೇಕು. ತಂದೆಯು ದುಃಖಧಾಮದಿಂದ ಬಿಡಿಸಿ ಕರೆದುಕೊಂಡು ಹೋಗಲು ಬಂದಿದ್ದಾರೆ ಆದ್ದರಿಂದ ಅವರನ್ನು ಮುಕ್ತಿಧಾತ ಮತ್ತು ಮಾರ್ಗದರ್ಶಕ, ಪತಿತಪಾವನನೆಂದು ಹೇಳುತ್ತಾರೆ. ಮಾರ್ಗದರ್ಶಕನೂ ಆಗಿದ್ದಾರೆ. ತಿಳಿಸಬೇಕು - ರಾವಣರಾಜ್ಯದ ವಿನಾಶ ಮತ್ತು ರಾಮರಾಜ್ಯದ ಸ್ಥಾಪನೆ ಮಾಡಲು ತಂದೆಯು ಬರಬೇಕಾಗುತ್ತದೆ. ಅವರೇ ಶಾಂತಿಯ ಸ್ಥಾಪನೆ ಮಾಡುತ್ತಾರೆ, ಅವರಿಗೆ ಯಾರು ಸಹಯೋಗಿಗಳಾಗುತ್ತಾರೆಯೋ ಅವರಿಗೆ ಶಾಂತಿಯ ಪಾರಿತೋಷಕವು ಸಿಗುತ್ತದೆ. ಶಾಂತಿಯ ಸ್ಥಾಪನೆ ಮಾಡುವವರೇ ಶಾಂತಿಯುತ ರಾಜ್ಯವನ್ನು ಕೊಡುತ್ತಾರೆ. ಅವರೇ ಪ್ರಿಯಾತಿಪ್ರಿಯ ತಂದೆಯಾಗಿದ್ದಾರೆ, ನಮಗೆ ಕಲ್ಪ-ಕಲ್ಪವೂ ಆಸ್ತಿಯನ್ನು ಕೊಡುತ್ತಾರೆ. ಎಷ್ಟು ಶ್ರೀಮತದಂತೆ ನಡೆಯುತ್ತಿರೋ ಅಷ್ಟುಶ್ರೇಷ್ಠರಾಗುತ್ತೀರಿ. ನಿಮಗೆ ಗೊತ್ತಿದೆ - ಶ್ರೇಷ್ಠಾತಿ ಶ್ರೇಷ್ಠ ತಂದೆಯಿಂದ ನಾವು ಶ್ರೀಲಕ್ಷ್ಮಿ-ಶ್ರೀನಾರಾಯಣರಾಗುತ್ತೇವೆ. 21 ಜನ್ಮಗಳಿಗೋಸ್ಕರ ಸೂರ್ಯವಂಶಿ, ಚಂದ್ರವಂಶಿ ರಾಜಧಾನಿಯು ಸ್ಥಾಪನೆಯಾಗುತ್ತಾ ಇದೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ದೂರಾಂದೇಶಿಗಳಾಗಿ ಕರ್ಮಬಂಧನವನ್ನು ಸಮಾಪ್ತಿ ಮಾಡಬೇಕಾಗಿದೆ. ಯಾವುದೇ ಲೆಕ್ಕಚಾರ ಅಥವಾ ಸಾಲವಿದ್ದರೆ ಅದನ್ನು ಇಳಿಸಿಕೊಂಡು ಹಗುರವಾಗಿ ತಂದೆಗೆ ವಾರಸುಧಾರರಾಗಬೇಕಾಗಿದೆ.

2. ಕರ್ಮಯೋಗಿಗಳಾಗಿ ಕರ್ಮವನ್ನೂ ಮಾಡಬೇಕು, ಜೊತೆ-ಜೊತೆಗೆ 8 ಗಂಟೆ ಸಮಯವನ್ನು ಸ್ವಪುರುಷಾರ್ಥದಲ್ಲಿ ಕೊಡಬೇಕಾಗಿದೆ. ಎಲ್ಲದರಿಂದ ಮಮತ್ವವನ್ನು ಅವಶ್ಯವಾಗಿ ತೆಗೆಯಬೇಕಾಗಿದೆ.

ವರದಾನ: ಪ್ರವೃತ್ತಿಯಲ್ಲಿದ್ದರೂ ಸಹ ಸಮರ್ಪಿತರಾಗಿ ಸೇವೆಯ ಗುಂಗಿನಲ್ಲಿರುವಂತಹವರು ಬಾಪ್ದಾದಾರವರ ಹೃದಯ ಸಿಂಹಾಸನಧಾರಿ ಭವ.

ಯಾವ ಮಕ್ಕಳು ಪ್ರವೃತ್ತಿಯಲ್ಲಿದ್ದರೂ ಸಹ ಸಮರ್ಪಿತರಾಗಿರುತ್ತಾರೆ ಅವರ ಸಹಯೋಗದಿಂದ ಸೇವೆಯ ವೃಕ್ಷ ಫಲೀಭೂತವಾಗಿ ಬಿಡುವುದು. ಅವರ ಸಹಯೋಗವೇ ವೃಕ್ಷಕ್ಕೆ ನೀರಾಗಿ ಬಿಡುವುದು. ಹೇಗೆ ವೃಕ್ಷಕ್ಕೆ ನೀರು ಸಿಗುವುದರಿಂದ ಒಳ್ಳೆಯ ಫಲ ಕೊಡುವುದು ಅದೇ ರೀತಿ ಶ್ರೇಷ್ಠ ಸಹಯೋಗಿ ಆತ್ಮರುಗಳ ಸಹಯೋಗದಿಂದ ವೃಕ್ಷ ಫಲೀಭೂತವಾಗುವುದು. ಇಂತಹ ಸೇವೆಯ ಗುಂಗಿನಲ್ಲಿ ಸದಾ ಇರುವಂತಹ, ಪ್ರವೃತ್ತಿಯಲ್ಲಿರುತ್ತಾ ಸಮರ್ಪಿತರಾಗಿ ನಡೆಯುವಂತಹ ಮಕ್ಕಳು ಬಾಪ್ ದಾದಾರವರ ಹೃದಯ ಸಿಂಹಾಸನಧಾರಿಗಳಾಗುತ್ತಾರೆ.

ಸ್ಲೋಗನ್: ಕಡಿಮೆಯಲ್ಲಿ ಕಡಿಮೆ ಸಮಯದಲ್ಲಿ ಸಂಕಲ್ಪಗಳನ್ನು ಬದಲಿಸಿ ಮತ್ತು ಬ್ರೇಕ್ ಹಾಕುವಂತಹ ಯುಕ್ತಿ ಕಲಿಯಿರಿ ಆಗ ಬುದ್ಧಿಯ ಶಕ್ತಿ ವ್ಯರ್ಥವಾಗಿ ಹೋಗಲು ಸಾಧ್ಯವಿಲ್ಲ.